International Journal of Kannada Research 2022; 8(3): 41-45




International Journal of Kannada Research
www.kannadajournal.com

**ISSN: 2454–5813**
IJKR 2022; 8(3): 41-45
© 2022 IJKR
www.kannadajournal.com
Received: 23-06-2022
Accepted: 25-07-2022

**ಡಾ.ಎಸ್.ಸುಂದರೇಶ**
ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗ, ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ.ಎಸ್.ಸುಂದರೇಶ**
ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ಸ್ನಾತಕ ಹಾಗೂ ಸ್ನಾತಕೋತ್ತರ ವಿಭಾಗ, ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

# ಗಬಾಳ ಸಾಂಸ್ಕೃತಿಕ ವಿಶ್ಲೇಷಣೆ

**ಡಾ.ಎಸ್.ಸುಂದರೇಶ**

**ಪೀಠಿಕೆ**

ಭಾರತೀಯ ದಲಿತ ಸಾಹಿತ್ಯದಲ್ಲಿ ಆತ್ಮಕಥೆಗಳಿಗೆ ವಿಶೇಷ ಸ್ಥಾನವಿದೆ. ಈ ಹಿನ್ನೆಲೆಯಲ್ಲಿ ಮರಾಠಿ ದಲಿತ ಸಾಹಿತ್ಯದ ಆತ್ಮಕಥೆಗಳು ಇತರೆ ಭಾಷೆಗಿಂತ ಭಿನ್ನವಾದ ಲೋಕವನ್ನು, ಬದುಕಿನ ಅನುಭವವನ್ನು ತೆರೆದಿಡುತ್ತವೆ. ಈ ಮೂಲಕ ಶೋಷಕ ಸಮಾಜದ ಕಣ್ಣನ್ನು ತೆರೆಯಿಸುವ ಪ್ರಯತ್ನ ಕಾಣಬಹುದು. ಅಲ್ಲದೆ ಶೋಷಿತರ ಬದುಕು ಸರಳರೇಖೆಯಲ್ಲ ಅದೊಂದು ಕಡಲ ಕಷ್ಟಕರ ಜೀವನವೆಂಬುದರ ದಾಖಲೆಯಾಗಿ ಹೊಮ್ಮುತ್ತವೆ. 'ಮರಾಠಿ' ಎಂಬ ಭಾಷಾ ಪ್ರಭೇದವನ್ನು ಕೊಂಚ ಬದಿಗಿರಿಸಿ ಕನ್ನಡಕ್ಕೆ ಅನುವಾದಗೊಂಡಿರುವ ಮರಾಠಿ ಲೇಖಕರ ಆತ್ಮಕಥೆಗಳನ್ನು ಓದಿದಾಗ ಈ ದೇಶದ ಮಣ್ಣಿನ ಮಕ್ಕಳ ಬದುಕಿನ ಕ್ರಮ ಅಮಾನವೀಯ ಹೊಂಡದಲ್ಲಿ ಬಿದ್ದು, ಎದ್ದು, ಒದ್ದು ಬಂದು ಸಾಧಕರಾಗಿರುವ ಸಂಗತಿಗಳು ಇಲ್ಲಿ ದಾಖಲಾಗಿರುತ್ತವೆ. "ಮಾರಾಠಿ ಸಾಹಿತ್ಯದಲ್ಲಿ ದಲಿತ ಲೇಖಕರ ಒಂದು ಪ್ರಭಾವ ಪೂರ್ಣವಾದ ಸಾಹಿತ್ಯ ಮಾದ್ಯಮ ಆತ್ಮಕಥೆ. ಕನ್ನಡದಲ್ಲಿ ಈ ಪ್ರಕಾರ ಬೆಳೆದು ಬಂದಿಲ್ಲ. ಮರಾಠಿ ದಲಿತ ಆತ್ಮಕಥೆಗಳನ್ನು ಬರೆದಿರುವ ಲೇಖಕರೇ ವಿರಳ. ದಲಿತ ಲೇಖಕರನ್ನು ಸಮಾಜ ಯಾವ ಯಾವ ರೀತಿಯಲ್ಲಿ ಹೇಗೆ ಹೇಗೆ ಶೋಷಣೆ ಮಾಡಿತ್ತೆಂಬುದನ್ನು ಹಾಗೂ ಆತ ಅದನ್ನು ಹೇಗೆ ಎದುರಿಸಿದನೆಂಬುದರ ವಾಸ್ತವ ಚಿತ್ರಣ ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ತಾವು ಅನುಭವಿಸಿದ ಅವಮಾನ, ಹಿಂಸೆ, ಸಮಾಜ ಮತ್ತು ಪರಂಪರೆಗಳ ಕಾಲಕಾಲಕ್ಕೆ ನೀಡಿದ ಬರೆ, ಅಜ್ಞಾನದಿಂದ ತಾವು ಅನುಭವಿಸಿದ ದಾಸ್ಯತ್ವ, ಹಸಿವು, ದಾರಿದ್ರ್ಯ, ಅವಮಾನ, ಸಮಾಜದ ಮಾನಸಿಕ ಸ್ಥಿತಿ ಇವುಗಳು ಮಹತ್ವದ್ದಾಗುತ್ತದೆ"[1] ಇಲ್ಲಿ ಅಪಮಾನಿತ ಬದುಕಿನ ಅನಾವರಣ ಆಗುವುದರ ಮೂಲಕ ಸಾಧಿತ ನೆಲೆಯನ್ನು ಮುಟ್ಟುವ ತನಕ ವಿಸ್ತಾರವಿರುತ್ತದೆ. ಹೊಸತನದ ಅನುಭವವನ್ನು ಕಟ್ಟಿಕೊಡುವಾಗಲೂ ಅಂತಹ ಬದುಕು ಇತರ ದಲಿತ ವ್ಯಕ್ತಿಗಳಿಗೂ ಆಗಿರಬಹುದಾದ ಸಾಧ್ಯತೆಗಳು ಅತೀ ಸಮೀಪವಾಗಿರುತ್ತವೆ. ಆದ್ದರಿಂದ ಪ್ರತಿಯೊಬ್ಬನ ದಲಿತ ಆತ್ಮಕಥೆಯೂ ಆ ಸಮುದಾಯವನ್ನು ಸದಾ ಪ್ರತಿನಿಧಿಸಿರುತ್ತದೆ. "ದಲಿತ ಆತ್ಮಕಥೆ ಒಬ್ಬ ವ್ಯಕ್ತಿಯ ಬದುಕಿನ ಹೋರಾಟದ ಅಥವಾ ಸಾಧನೆಯ ಕಥೆಯಲ್ಲ, ಇಲ್ಲಿ ನಾನು ಎನ್ನುವ ಅಹಂ ನಾವು ಎನ್ನುವ ಒಗ್ಗಟ್ಟಿನಲ್ಲಿ ಕರಗಿ ಹೋಗಿ ಒಂದು ಜನಾಂಗದ ತುಳಿತಕ್ಕೊಳಗಾದ ಜನರ ಧ್ವನಿಯಾಗಿದೆ. ಇಲ್ಲಿ ಬಡತನ, ಕೋಪ, ಅಪಮಾನಗಳೆಲ್ಲವೂ ಮಡುಗಟ್ಟಿರುವುದರೊಂದಿಗೆ ಒಂದು ಜನಾಂಗದ ತಣ್ಣಗಿನ ಬದುಕಿನ ಬವಣೆಗಳು ಇವೆ."[2] ಈ ಹಿನ್ನೆಲೆಯಲ್ಲಿ ದು.ನಿಂ. ಬೆಳಗಲಿ ಅವರ ಅನುವಾದಿತ ದಾದಾ ಸಾಹೇಬ ಮಲ್ಹಾರಿ ಮೋರೆ ಅವರ 'ಗಬಾಳ' ಆತ್ಮಕಥೆಯನ್ನು ನೋಡಬಹುದು. ಹಾಗೆಯೇ, "ದಲಿತ ಸಾಹಿತಿಗಳ ಆತ್ಮಕಥೆ ಓದುವುದು ಏಕಕಾಲಕ್ಕೆ ಆಸಕ್ತಿ ಮತ್ತು ಆತಂಕಗಳನ್ನು ಹುಟ್ಟಿಸುತ್ತದೆ. ಒಂದು ಹೊಸ ಅನುಭವ ಲೋಕವೊಂದರ ಶೋಧನೆ ಎಂಬ ಕಾರಣಕ್ಕೆ ಆಸಕ್ತಿ, ಸವರ್ಣೀಯ ಸಮಾಜದ ಹಿಂಸೆ ಆತ್ಮಕಥನದ ಸಾಹಿತ್ಯ ಕೃತಿಯಲ್ಲಿಯೇ ಎದ್ದು ಕಾಣುತ್ತದೆ ಎಂಬ ಕಾರಣಕ್ಕೆ ಆತಂಕ ಮಹಾರಾಷ್ಟ್ರೀಯ ಅಥವಾ ಕನ್ನಡದ ದಲಿತ ಲೇಖಕರ ಆತ್ಮಕಥನಗಳನ್ನು ಓದಿದಾಗ ಒಂದು 'ಬೋನ್ಸಾಯ್' ಮರವನ್ನು ಕಂಡ ಅನುಭವವಾಗುತ್ತದೆ"[3] ಎಂಬ ಮಾತನ್ನು ಒಪ್ಪಬಹುದಾಗಿದೆ.

ಗಬಾಳ ಇದು ಮರಾಠಿ ಆತ್ಮಕಥೆ. ಕನ್ನಡಕ್ಕೆ ದು.ನಿಂ. ಬೆಳಗಲಿ ಅನುವಾದಿಸಿದ್ದಾರೆ. ಇದರ ಮೂಲ ಲೇಖಕರು ದಾದಾಸಾಹೇಬ ಮಲ್ಹಾರಿ ಮೋರೆ, ಗಬಾಳದ ಅರ್ಥ ಚಿಂದಿಗಂಟು, ಸರಕು ಸಾಮಾನು ಸರಂಜಾಮು, ನಿರುಪಯುಕ್ತ ವಸ್ತುವನ್ನು ಒಂದೆಡೆ ಸೇರಿಸಿದ ಗುಂಪು ಎಂದು ಅದರ ಅರ್ಥ. ಸ್ವತಂತ್ರ ಭಾರತದ ಸ್ಥಿತಿಯ ಅನಾವರಣ ಮಾಡುವ ಗಬಾಳ ಅನೇಕ ಬಿಕ್ಕಟ್ಟುಗಳನ್ನು ತೆರೆದಿಡುತ್ತದೆ.

ಸಾಮಾಜಿಕ ಸ್ಥಾನಮಾನಗಳಿಲ್ಲದ, ಆರ್ಥಿಕ ಸ್ವಾವಲಂಬನೆಯ ಮರಿಚಿಕೆಯಾದ ಅಲೆಮಾರಿ ಜನಾಂಗ ತನ್ನ ಅಸ್ತಿತ್ವ ಕಳೆದುಕೊಂಡು ಬದುಕು ಮೂರಾಬಟ್ಟೆಯಾದ ಅತಂತ್ರ ಬದುಕಿನ ಅನೇಕ ಮಗ್ಗಲುಗಳನ್ನು ಪರಿಚಯಿಸುತ್ತದೆ.

ಆತ್ಮಕಥನವೆನ್ನುವುದು ಸಾಮಾನ್ಯ ಬದುಕಿನಿಂದ ಅಸಮಾನ್ಯ ಬದುಕಿನೆಡೆಗೆ ಹೆಜ್ಜೆ ಹಾಕಿದ ವಿವರಗಳನ್ನು ದಾಖಲಿಸುತ್ತಾ, ತಾನು ಕಂಡು ಉಂಡ ಅನೇಕ ಕಹಿ ಘಟನೆಗಳನ್ನು ಅನುಭವಿಸುತ್ತಾ ಆ ಅನುಭವವೇ ತನ್ನ ಬದುಕಿನ ಅನೇಕ ಕ್ರಿಯಾಶೀಲತೆಗಳಿಗೆ ಕಾರಣವಾಗುವ ನಗ್ನ ಸತ್ಯವನ್ನು ಹೇಳುತ್ತಿದೆ. ಅನೇಕ ಸಂದರ್ಭಗಳಲ್ಲಿ ಆತ್ಮಕಥನ ಸಪ್ಪೆ ಎನಿಸಬಹುದು ಆದರೆ 'ಗಬಾಳ' ಬಾಲ್ಯದಿಂದ ಯೌವ್ವನದ ವರೆಗಿನ ಅನೇಕ ತೊಡಕುಗಳನ್ನು ಹೇಳುತ್ತಲೆ. ತನ್ನ ಅಸ್ತಿತ್ವವನ್ನು ಕಂಡು ಕೊಳ್ಳುವ ದಾದಾಸಾಹೇಬರ ಸಾಹಸಮಯ ಮನೋಧೈರ್ಯ ಕೃತಿಯಲ್ಲಿದೆ ಸಾಮಾಜಿಕ ಅಸ್ತಿತ್ವವನ್ನು ಕಳೆದುಕೊಂಡ ಈ ಅಲೆಮಾರಿ ಜನಾಗಂಕ್ಕೆ ತನದೇ ಆದ ಬದುಕಿನ ಚೌಕಟ್ಟಿದೆ, ಸಂಪ್ರದಾಯಗಳಿವೆ, ಆಚರಣೆಗಳಿವೆ. ಅವರದೇ ಆದ ಕಾನೂನುಗಳಿವೆ ಇವೆಲ್ಲದರ ಮಧ್ಯೆ ಬದುಕಿನಲ್ಲಿ ಭವಿಷ್ಯ ಕಳೆದುಕೊಂಡವರು ಇತರರ ಭವಿಷ್ಯವನ್ನು ಹೇಳುವುದು ವಿಚಿತ್ರವಾಗಿದೆ. ಆದರೆ ಅದು ಬದುಕಿಗೆ ಅನಿವಾರ್ಯವಾದ ಹೊಟ್ಟೆಹೊರೆಯುವ ಉದ್ಯೋಗದ ಕಲೆಯಾಗಿದೆ. ಆದರೆ ಭಿಕಾರಿಗಳು ನಾಗರಿಕ ಜಗತ್ತಿನ ಜನರ ಭವಿಷ್ಯ ನಿರ್ಧರಿಸುವುದು ಅವರ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಅಲೆಮಾರಿಗಳ ಬದುಕು ವೈಪರಿತ್ಯಗಳಿಂದ ಕೂಡಿತ್ತು ಪ್ರತಿಯೊಂದು ಗೂಢಾರದ ಮುಂದೆ ಕುದುರೆ, ನಾಯಿ ಕಟ್ಟುವುದೇ ಅವರ ದೊಡ್ಡಸ್ತಿಕೆಯ ಸಂಕೇತವಾಗಿತ್ತು. ಇವರ ಬದುಕಿನಲ್ಲಿ ಲಜ್ಜೆ ಎನ್ನುವುದು ಗೊತ್ತಿರಲಾರದ ಸಂಗತಿ. ಬರಿಮೈ, ಬೆತ್ತಲೆಯಲ್ಲೇ ಅಡುವ ಹುಡುಗರು, ಆಧುನಿಕ ಬದುಕಿಗೆ ಮತ್ತು ಪ್ರತಿಷ್ಠೆಗಾಗಿ ಬಟನ್ ಇಲ್ಲದ ರೇಡಿಯೋ ಕಟ್ಟಿಗೆಗೆ ತೂಗುಹಾಕಿ ದೊಡ್ಡಸ್ತಿಕೆ ಮೆರೆಯುವುದು ಆಧುನಿಕತೆಯ ಪ್ರವೇಶ ಎನ್ನಬಹುದು. ಈ ಕೃತಿ ವಿದ್ಯಾಭ್ಯಾಸ, ಅಲೆಮಾರಿಬದುಕು, ಸಂಕಷ್ಟಗಳು, ಅವಮಾನ, ಸ್ವಾಭಿಮಾನ, ಮೂಢನಂಬಿಕೆ ಬದುಕಿನ ಸಾಂಸ್ಕೃತಿಕತೆ ಮುಂತಾದ ವಿಷಯಗಳ ಕಡೆ ಗಮನ ಸೆಳೆಯುತ್ತದೆ.

ದಾದಾ ಸಾಹೇಬರ ಅಜ್ಜ ನಾಗೂಮೋರೆ "ಮಲಾರಿ ಪಾರ ರಗಡ ದೊಡ್ಡಂವ ಆಂಗ್ಯಾನು ಅರಿವಗೊಂದ ಹಡಪಾ ಮಾಡಿ ಕುಡ ಅಂದ್ರನಾಕ ರೊಟ್ಟಿ ಚೂರಾದ್ರೂ ತರ್ತಾನು ಮನ್ಯಾನ ಒಂದ ಟಾಯೇ ಮದ ಊಟಾದ್ರೂ ಹೊರಗೆ ಹೊಗತೇತಿ" (ಪುಟ 07) ಎಂದು ಹೇಳುವ ಮಾತುಗಳನ್ನು ಗಮನಿಸಿದರೆ ಸಾಂಪ್ರದಾಯಿಕ ಬದುಕಿನ ಮುಂದುವರಿದ ಕಸುಬನ್ನು ದಾದಾ ಸಾಹೇಬರೂ ಬದುಕಿಗಾಗಿ ನಿರ್ವಹಿಸಬೇಕೆನ್ನುವ ಅಜ್ಜನ ಮನಸ್ಸು ಸಹಜವಾಗಿದೆ. ಏಕೆಂದರೆ ಅದು ಹೊಟ್ಟೆಪಾಡಿನ ಜೀವನ. ಆದರೆ ದಾದಾ ಸಾಹೇಬನ ತಂದೆ ಮಲ್ಹಾರಿಯ ಆಲೋಚನೆ ಶಾಲೆಗೆ ಕಳಿಸಬೇಕು ಎಂಬುದು ಹೀಗಾಗಿ ತಂದೆಯ ಮನಸ್ಸು ಆಧುನಿಕತೆಗೆ ತೆರೆದು ಕೊಳ್ಳುತ್ತಿದೆ ಮತ್ತು ಅದರ ಹಿಂದೆ ಗಂಭೀರವಾದ ಸಂಕಟ ಅನುಭವವಿದೆ. ಆದರೆ "ಅಜ್ಜ ಎಲಾಮಲಾರಿ! ನಿನಗೇನ ಹುಚ್ಚುಗಿಚ್ಚ ಹಿಡದೈತೇನ" ಎನ್ನುವ ಅಪರಾಧಿ ಮನಸ್ಥಿತಿ ಗೋಚರವಾಗುತ್ತದೆ. ಅದರೆ ಜೊತೆಗೆ ಶಿಕ್ಷಣವೆಂಬುದು ನಿಷ್ಪ್ರಯೋಜಕ ಅದು ಹೊಟ್ಟೆ ತುಂಬಿಸುವುದಿಲ್ಲ ಎಂಬ ಭಾವನೆ ವ್ಯಕ್ತವಾಗುತ್ತದೆ. ಇದು ಒಂದು ರೀತಿಯಲ್ಲಿ ಸರಿ. ಆದರೆ ಇನ್ನೊಂದು ರೀತಿಯಲ್ಲಿ ಅಜ್ಜನ ಆಲೋಚನೆ ತಪ್ಪು ಎನಿಸುತ್ತದೆ.

ಸಲಗರದ ಪ್ರಾಥಮಿಕ ಶಾಲೆಗೆ ದಾದಾಸಾಹೇಬರ ಮೊದಲ ಪ್ರವೇಶ. ಈತನಿಗೆ ಸಂತೋಷ ಆದರೆ ಈತನನ್ನು ಕಂಡು ಸಹಪಾಠಿಗಳು ಸರ್ಕಸ್ಸಿನ ವಿದೂಷಕನನ್ನು ನೋಡುವ ಹಾಗೆ ನೋಡುವುದು ಮತ್ತು ಹರಿದ ಚಡ್ಡಿ, ಕುರಿಯಂತೆ ಕೆದರಿದ ಕೂದಲು, ಹೊಲಿಗೆ ಹಾಕಲು ಬಾರದ ಅಂಗಿ ಇದು ದಾದಾ ಸಾಹೇಬನ ನಿಜ ಸ್ಥಿತಿಯನ್ನು ಬಿಂಬಿಸುತ್ತಿದೆ. ಜೊತೆಗೆ 'ಕಲಿಕೆ' ಸಹಪಾಠಿಗಳ ಕುಹಕ, ಆಶ್ಚರ್ಯಚಕಿತ ನೋಟ ಇವನನ್ನು ವಿಚಲಿತನನ್ನಾಗಿ ಮಾಡುವುದಿಲ್ಲ ಏಕೆಂದರೆ ತನ್ನ ಸಮುದಾಯದ ಜಗತ್ತು ತನ್ನ ಉಡುಗೆ –ತೊಡುಗೆಗಿಂತ ತೀರಾ ಭಿನ್ನವಾಗೇನೂ ಇಲ್ಲ ಎಂಬುದು. ಶಾಲೆ ಮಾಸ್ತರು "ನೀ ಭಿಕಾರಿ ಪೈಕಿ ಪಾರಾ, ನಿನ್ನ ಹೆಸರ್ನಾ ಸಾಲ್ಯಾಗಹ್ಯಾಂಗ ಹಚ್ಚಬೇಕು" (ಪುಟ 08) ಎಂದು ಹೇಳುವುದರ ಜೊತೆಗೆ "ಇಲ್ನೋಡ ಇಂದ ಬಂದದಿ ಇಲ್ಲಿ ಆ ಅಂಗಳದಾಗ ಕುಂಡು" (ಪುಟ 08) ಎನ್ನುವುದು ಈತನ ಅಲೆಮಾರಿತನದ ಸಮಸ್ಯೆ ಮತ್ತು ಅಶುಚಿಯಿಂದ ಕೂಡಿದ ಕಾರಣಕ್ಕಾಗಿಯೇ ಅಂಗಳದಲ್ಲಿ ಕೂರಿಸುವುದು ಮಾಸ್ತರ ಮನಸ್ಥಿತಿಯನ್ನು ಬಿಂಬಿಸುತ್ತದೆ.

ಇವರ ವೇಷಭೂಷಣ ವಿಶಿಷ್ಟವಾದುದು ಹರಕು ಕೋಟು, ತಲೆಗೆ ಚಿಂದಿಸುತ್ತಿದಂತೆ ಪಟಕಾಸುತ್ತಿಕೊಂಡು, ಕೊರಳಲ್ಲಿ ಬುಡುಬುಡಿಕೆ, ಪಂಚಾಂಗದ ಗಂಟು, ಕೈಯಲ್ಲಿ ಬಡಿಗೆ ಹೀಗೆ ಬೇಡಿ ಬದುಕುವ ಪರಿಯಾಗಿದೆ. ಇವರನ್ನು ಹಕ್ಕಿ ಶಕುನದವರು ಎನ್ನಲಾಗುತ್ತದೆ. ಏಕೆಂದರೆ ಹಕ್ಕಿ ಹೇಳಿದ್ದನ್ನೇ ನುಡಿಯುತ್ತಾರೆ. ಎಂದು ಇವರನ್ನು ಹಾಲಕ್ಕಿ ಎಂದೂ ಕರೆಯಲಾಗುತ್ತದೆ. ಆ ಪಕ್ಷಿಯ ಹೆಸರಿನಲ್ಲೇ ಇವರ ಜೀವನ. ಹೀಗಾಗಿ ಹೊಟ್ಟೆಪಾಡಿನ ಕಾರಣಕ್ಕಾಗಿ ವಿಸ್ತಾರವಾದ ಸ್ಥಳವನ್ನು ಹುಡುಕಿ ಬೀಡುಬಿಡುತ್ತಿದ್ದರು. ಇಷ್ಟೆಲ್ಲದರ ನಡುವೆ ದಾದಾ ಸಾಹೇಬನ ಕಲಿಕೆ ಅರ್ಧಕ್ಕೆ ನಿಲ್ಲುವುದು. ಅಜ್ಜ ಮತ್ತು ತಂದೆಯ ತೀರ್ಮಾನದಂತೆ ಬೇಡಿಕೊಳ್ಳಲು ಹೋಗಬೇಕಾಗುತ್ತದೆ. ಅದಕ್ಕಾಗಿ ತರಬೇತಿಯನ್ನು ಕೊಡಲಾಗುತ್ತದೆ. "ಜಯವಾಗುತೈತಿ....ಲಕ್ಶ್ಮೀ ಒಲೀತಾಳು.... ಯಶಾಸಿಗತೈತಿ.... ಚಿಗವ್ವಾ ಒಂದ ರೊಟ್ಟಿ ತುಣುಕು ಕೊಡು ಮತ್ತ ರೊಟ್ಟಿ ತುಣುಕಕೊಡೂ ತನಕಾ ಅಲ್ಲಿಂದ ಹೋಗಬಾರದು. ನಾಯಿ ಕಡೆ ಲಕ್ಷ್ಯಕೊಡು ನಾಯಿಗೀಯಿ ಕಡಿಲಾಕ ಬಂದ್ರ ಬಡಗಿ ಅಡ್ಡ ಹಿಡಿಬೇಕು ಅಂವ್ನ ಬಡೀಬಾರದು ನಾಯಿ ಮುಂದ ಓಡಬಾರದು.....ಸಾವಕಾಸ ಹೋಗಬೇಕು" (ಪುಟ 17) ಹೀಗೆ ಬದುಕುವ ಸಲುವಾಗಿ ಹೊಟ್ಟೆಪಾಡಿಗೋಸ್ಕರ ಹೊಸ ಜಗತ್ತಿನ ವಿಶೇಷವಾದ ಪಾಠವಾಗಿತ್ತು ತನಗಿಲ್ಲದ ಲಕ್ಷ್ಮಿ, ತನಗಿಲ್ಲದ ಯಶಸ್ಸು, ಜಯವನ್ನು ಅವರಿಗೆ ಹಾರೈಕೆಯ ಮಾತುಗಳನ್ನು ಹಾಡುತ್ತಾ ಆ ನೆಪದಲ್ಲಿ ಹೊಟ್ಟೆ ತುಂಬಿಸಿ ಕೊಳ್ಳುವ ಕೌಶಲ್ಯವನ್ನು ಕಲಿಯುವುದು ಅನಿವಾರ್ಯವಾಗಿತ್ತು ಮತ್ತು ರೊಟ್ಟಿಯನ್ನು ಕೇಳುವಾಗಿನ ವಿನಮ್ರತೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು ಹಾಗೂ ಹೊಟ್ಟೆತುಂಬಿಸಿಕೊಳ್ಳಲು ಪಡಬೇಕಾದ ಅನೇಕ ಕೌಶಲ್ಯಗಳನ್ನು ಅನುಭವವೇ ಹೇಳಿಕೊಡುತ್ತಿತ್ತು.

ಇಂತಹ ಬದುಕಿನ ಸಂದರ್ಭದಲ್ಲಿ ಅವಮಾನಗಳು ಸಹಜ ದಾದಾ ಸಾಹೇಬ ಮೊದಲ ಬಾರಿಗೆ ಬೇಡಲು ಹೋದಾಗ ಒರ್ವ ಮಹಿಳೆ "ಹೋಗ, ಸಾಯೋ ಹೋಗ..... ಬದಕಲಾಕ ಆಗಲಿಲ್ಲ ಅಂದ್ರ ನ'ಮನ್ಯಾಕ ಕಾಡತೀರಿ" (ಪುಟ 19) ಎನ್ನುವುದು ಹಾಗೆಯೇ "ಏ ಪೋರಾ, ನಮ್ಮ ಎಮ್ಮಿ ಶಗಣಾತಗೀಲಾಕ ಇರ್ತಿಯಾನ? ಇವ್ನವ್ನ ಫುಕಟ ತಿನಾಕ ನಿಮ್ಮ ಜಾತಿ ಸೋಕಾಸೇತಿ, ಹೋಗ" (ಪುಟ 19) ಎನ್ನುವ ಮಾತುಗಳು ಆಗಾಗ್ಗೆ ಸ್ವಾಭಿಮಾನಕ್ಕೆ ಪೆಟ್ಟು ಕೊಡುತಿದ್ದವು. ಇಂತಹ ಅವಮಾನದ ಮಾತುಗಳ ನಡುವೆ ಬದುಕು ಸಾಗಿಸುವುದು ದುಸ್ತರವಾಗಿತ್ತು. ಹಾಗೆಯೇ ಅನಿವಾರ್ಯವೂ ಆಗಿತ್ತು "ಇಬ್ಬಿಬ್ರು ಬರ್ಲಾಕಯಾನ ನಿಮ್ಮಪ್ಪ ಅಗಾವ ಗಂಟ ತಂದ ಇಟ್ಟಿದಾನೇನು" ಎನ್ನುವುದು (ಪುಟ20), ಅವಮಾನದ ಭೀಕರತೆ ದಿನದಿಂದ ದಿನಕ್ಕೆ ಅಧಿಕವಾಗುತ್ತಿತ್ತು. ಪಾಟೀಲರ ಲಗ್ನದ ಸಮಾರಂಭದಲ್ಲಿ ಊಟಕ್ಕಾಗಿ

ಪರದಾಡುವುದು, ನಾಗೂ ಅಜ್ಜನ ವಿನಯ ಪೂರ್ವಕವಾಗಿ ಬೇಡಿಕೊಳ್ಳುವಿಕೆ, ಪಾಟೀಲರ ತಿರಸ್ಕಾರದ ಮಾತುಗಳು ಮನ ಮಿಡಿಯುವಂತಹದ್ದು. "ಸಾಹೇಬನಾವ ದೋಸಗ್ಯಾರ ಅದೀವು ಬೇಡಿಕೊಂಡ ತಿರಗತೀವು ನಿಮ್ಮ ಮನ್ಯಾಗ ಲಗ್ನ ಏತೆಂತ ಆಸೆ ಮಾಡಿ ಬಂದೀವು ಚೂರ ಚೂರ ನೀಡ್ರಿ" (ಪುಟ 34). ಎಂದು ನಾಗು ಅಜ್ಜನ ಮಾತಿಗೆ "ಹೋಗತೀರೋ ಇಲ್ಲಾದ್ರ ಬಡಗೀ ತಗೋತ್ಯಾನ" (ಪುಟ 35) ಎಂಬ ಮಾತಿನ ಜೊತೆಗೆ "ಇವ್ನವ್ನ ನಿಮ್ಮ ಜಾತೀನ ಆಸೆ ಬುರುಕ ಏತಿ ಹೋಗ್ರಿ ಏಳ್ರಿ ಓಡ್ರಿ" (ಪುಟ 35).ಎಂಬ ಅವಮಾನದ ಮಾತುಗಳನ್ನು ಸಹಿಸಿಕೊಳ್ಳಬೇಕಾಗಿತ್ತು. ಅದೇ ಸಂದರ್ಭದಲ್ಲಿ ನಾಯಿಗಳು ಮುಸುರೆಯನ್ನು ಹೊಟ್ಟೆ ತುಂಬಾ ತಿನ್ನುತಿದ್ದವು ಆದರೆ ಅವುಗಳ ಪರಿಸ್ಥಿತಿಗಿಂತ ಇವರ ಪರಿಸ್ಥಿತಿ ಹೀನಾಯವಾಗಿತ್ತು. ಹೀಗಾಗಿ ಪ್ರಾಣಿಗಳಿಗಿಂತಲೂ ಕಡೆಯಾದ ಜೀವನ ಇವರದಾಗಿತ್ತು. ಊಟದ ಆಸೆಗಾಗಿ ನಿರೀಕ್ಷೆ ಮಾಡಿದ ಕುಟುಂಬಸ್ಥರು ಉಪವಾಸ ಮಲಗಬೇಕಾದ ಸ್ಥಿತಿ ನಿರ್ಮಾಣವಾಯಿತು.

ವಸತಿ ಪ್ರದೇಶಕ್ಕೆ ಬೇಡಲು ದಾದಾಸಾಹೇಬ, ಅಬಾಸ ಹೋದಾಗ ದಾದಾಸಾಹೇಬನ ಕಾಲನ್ನು ನಾಯಿ ಕಚ್ಚುವುದು, ಕೂಗಿದರೂ ವಸತಿ ಪ್ರದೇಶದವರು ಬಾರದೇ "ಇವ್ನವ್ನ ಭಿಕಾರಿ ಪಾರಗೋಳ್ಗಿಯಾನ ಕೆಲಸ ಇರೋದಿಲ್ಲ ಕೈಯಾಗ ತಾಟಇಟಗೊಂಡು ಬೇಡಾಕ ಓಡ್ತಾರು ನಾಯಿ ಕಚ್ಚಿತು, ಚಲೂ ಅತು ಇನ್ನೊಮ್ಮಿ ಇತ್ತ ಬರಾಂಗಿಲ್ಲ" (ಪುಟ 56). ಎಂದು ದ್ವೇಷದ ಮಾತುಗಳನ್ನು ವಸತಿ ಪ್ರದೇಶದ ವ್ಯಕ್ತಿ ಆಡುತ್ತಾನೆ. ಒಂದೆಡೆ ರಕ್ತ ಸೋರುವುದು, ಬೇಡಿತಂದ ರೊಟ್ಟಿಗಳನ್ನು ವಸತಿ ನಾಯಿಗಳು ತಿನ್ನುವುದು, ಅಬಾಸನ ಹೆದರಿಕೆ, ತಾಯಿಯ ರೋಧನ, ಬೈಗುಳ, ಅಮಾನವೀಯ ನಡವಳಿಕೆ, ಇವುಗಳನ್ನು ಗಮನಿಸಿದಾಗ ನೋವವುಂಟಾಗುತ್ತದೆ. ಹೀಗಾಗಿ ಇವರ ಬದುಕ ಆತಂಕದಿಂದ ಕೂಡಿತು.

ಪ್ರಾಮಾಣಿಕವಾಗಿ ಬೇಡಿತಂದ ಕೋಳಿ, ಮಿಶ್ರಧಾನ್ಯ ಮುಂತಾದ ವಸ್ತುಗಳನ್ನು ಸಂತೆಯಲ್ಲಿ ಮಾರಾಟ ಮಾಡುವಾಗ ಆಗುವ ಅವಮಾನ ಗಂಭೀರವಾದುದು ಏಕೆಂದರೆ 'ಕಳ್ಳ'ರೆಂದು ಭಾವಿಸುವ ಗ್ರಾಹಕರು ಇವರ ವಸ್ತುಗಳನ್ನು ಅರ್ಧಬೆಲೆಗೆ ಕೊಳ್ಳುವುದರ ಮುಖಾಂತರ ಅವರಿಂದ ದೂರ ಇರಲು ಯತ್ನಿಸುತಿದ್ದುದು ಮನುಷ್ಯತ್ವವನ್ನು ಮರೆತಂತಿತ್ತು. ಬೇಡಿತಂದ ವಸ್ತುಗಳ ಮಾರಾಟದಿಂದಲೇ ಇವರ ಜೀವನ ನಿರ್ವಹಣೆ, ದಾದಾಸಾಹೇಬನ, ಮಕ್ಕಳ ವಿದ್ಯಾಭ್ಯಾಸ ಸಾಗಬೇಕಾಗಿತ್ತು. ಜೊತೆಗೆ ಅನುಕೂಲವಿದ್ದ ಗ್ರಾಮ ಸಿಗುವುದು ಕಷ್ಟವಾಗಿತ್ತು ಸಿಕ್ಕರೂ ಬೈಗುಳ, ಏಟುಗಳನ್ನು ಸಹಿಸಿಕೊಂಡು ಇರಬೇಕಾಗಿತ್ತು. ಇದಕ್ಕೆ ಕಾರಣ ಕೀಳು ಜನಾಂಗವೆಂಬುದು ಹೀಗೆ ದಿನದಿಂದ ದಿನಕ್ಕೆ ಬದುಕು ದುಸ್ತರವಾಗುತಿತ್ತು. ಏಕೆಂದರೆ ಒಂದೂರಿನಿಂದ ಇನ್ನೊಂದೂರಿಗೆ ಸಂಚರಿಸುವಾಗ ಮಕ್ಕಳು, ಸಾಮಾನುಗಳು (ಗಂಟುಗಳು) ನಾಯಿ, ಕೋಳಿ, ಕುದುರೆ, ವಯಸ್ಸಾದವರು, ಅನಾರೋಗ್ಯ ಪೀಡಿತರು, ಗರ್ಭಿಣಿಯರು, ಬಾಣಂತಿ, ಹೀಗೆ ಹತ್ತು ಹಲವು ತೊಡಕುಗಳು ಅಲೆಮಾರಿ ಜನಾಂಗಕ್ಕೆ ಎದುರಾಗುವ ಸಮಸ್ಯೆಗಳಾಗಿದ್ದವು.

ಇವರ ಬದುಕು ಎಷ್ಟೊಂದು ಕ್ರೂರವಾಗಿತ್ತೆಂದರೆ ಮಾಲಗಾಂವನ ಹೊರ ಪ್ರದೇಶದಲ್ಲಿ ವಸತಿಗಾಗಿ ಡೇರೆ ಹಾಕಿದಾಗ "ಎಲ್ಲೆಡೆ ಹೇಲು, ಹೊಲಸು ಕಾಣುತ್ತಿತ್ತು. ಆದರೆ ನಮ್ಮ ಜನರಿಗೆ ಅದರ ದುರ್ವಾಸನೆ ಬರುತ್ತಿರಲಿಲ್ಲ ಆ ಹೊಲಸಿನಲ್ಲಿಯೇ ನಮ್ಮ ಒಜ್ಜೆಗಳನ್ನು ಇಳಿಸತೊಡಗಿದೆವು" (ಪುಟ 27). ಹೀಗೆ ಅದೇ ಸ್ಥಳದಲ್ಲಿ ಊಟ, ನಿದ್ರೆ ಬದುಕನ್ನು ಕಳೆಯುವ ಈ ಸಮುದಾಯ ಅಶುಚಿತ್ವದ ನಡುವೆ ಬದುಕು ಸಾಗಿಸಬೇಕಾದ ಕ್ಲಿಷ್ಟಕರ ಪರಿಸ್ಥಿತಿ ಎದುರಾಗುತಿದ್ದುದು ಅತ್ಯಂತ ಬೇಸರದ ಸಂಗತಿ. ಇಂತಹ ವ್ಯವಸ್ಥೆಗೆ ಹೊಂದಾಣಿಕೆ ಮಾಡಿಕೊಂಡು ಬದುಕುವ ಗಟ್ಟಿ ಮನಸ್ಸು ಇವರದು. ಹಾಗೆಯೇ ಎಂತಹ ವಿಚಿತ್ರ ಪರಿಸ್ಥಿತಿ ಎಂದರೆ ರಾಜಂಗಿಣಿಗೆ ಬಂದಾಗ ರಾತ್ರಿಯಾಗಿತ್ತು ಬೆಳಗ್ಗೆ ಎದ್ದು ನೋಡಿದರೆ ಆ ಸ್ಥಳ ಸ್ಮಶಾನವಾಗಿತ್ತು. ಹೆಣಹುಗಿದ ಗೋರಿಗಳ ಮೇಲೆ ತಮ್ಮ ಸಾಮಾನುಗಳು, ಹೆಣವನ್ನು ಸುಟ್ಟ ಕಟ್ಟಿಗೆಗಳಲ್ಲೇ ಇವರ ಆಹಾರ ತಯಾರಾದುದು. ಇವೆಲ್ಲದರ ನಡುವೆ ವ್ಯಂಗ್ಯದ ಮಾತುಗಳಿಗೆ ಗುರಿಯಾಗಬೇಕಾಯಿತು."ಇವ್ರವ್ನ ಇವರೇನ ದೋಸಗ್ಯಾರೊ ಯಾನ ದೆವ್ವಿನ ಮಕ್ಕಳೊ ಮಸಣದಾಗ ಅದಾರು" (ಪುಟ 93). ಇವರ ಮಾತುಗಳನ್ನು ಕಂಡರೆ ಸಾಂಪ್ರದಾಯಿಕ ನೆಲೆಯ ಆಲೋಚನಾ ಕ್ರಮವನ್ನೇ ದಿಕ್ಕುಪಾಲು ಮಾಡುತ್ತದೆ. ಜೊತೆಗೆ ತುಕಾರಾಮ ಮೋರೆಗೆ ಬಿದ್ದ ಕನಸು ಎಲ್ಲರನ್ನೂ ಭಯಭೀತರನ್ನಾಗಿ ಮಾಡುತ್ತದೆ.

ಕುಂಬಾರಿಗೆ ಬಂದಾಗ ಮಳೆಯ ಕಾರಣದಿಂದ ರಾತ್ರಿಯೆಲ್ಲ ಕೆಸರಿನಲ್ಲಿ ಕಳೆಯುವುದು ಮತ್ತು ವಿಮಲಳಿಗೆ ಹೆರಿಗೆ ನೋವು ಅಧಿಕವಾಗುವುದು, ಎಲ್ಲ ಹೆಂಗಸರೂ ಸೇರಿ ಒಟ್ಟಾಗಿ ಸಮಸ್ಯೆ ಪರಿಹರಿಸಿಕೊಳ್ಳುವುದು ಮೆಚ್ಚುವಂತಹದ್ದು. ಹಾಗೂ ಗಂಡು ಮಗುವಿಗೆ ಜನನವಾದದ್ದು ಸಂತೋಷವಾಗುತ್ತದೆ. ಅದಕ್ಕೆ ಕಾರಣ ಗಂಡಾದರೆ ಬೇಡಲು ಅನುಕೂಲವಾದೀತು ಎಂಬ ಕಾರಣವಿರಬೇಕು. ಹೀಗಾಗಿ ಬಾಣಂತಿ ವಿಮಲಳನ್ನು ಮಳೆಯ ಕಾರಣದಿಂದ ಸಾಮಾನುಗಳ ಮೇಲೆ ಮಲಗಿಸಬೇಕಾದ ವಿಚಿತ್ರ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಆದ್ದರಿಂದ "ಜಾತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಅಡವಿಯಲ್ಲಿಯೇ ಹುಟ್ಟುತಲಿದ್ದ ಅಡವಿಯಲ್ಲಿಯೇ ಸಾಯುತಲಿದ್ದ" (ಪುಟ 50) ಎಂಬ ಮಾತು ಸತ್ಯವಾದುದು.

ಇಲ್ಲಿ ವಿಶೇಷವಾಗಿ ಗಮನಿಸಬೇಕಾದುದು ಶೂದ್ರ ಸಮುದಾಯದ ಸಾಂಸ್ಕೃತಿಕ ಬದುಕಿನಲ್ಲಿ ಮೈಮೇಲೆ ಬರುವ ದೇವರು ಮತ್ತು ಭಕ್ತರ ನಡುವಿನ ಸಂಬಂಧಗಳ ಸಂಭಾಷಣೆ ಶೂದ್ರ ಸಮುದಾಯದಲ್ಲಿ ಮಾತ್ರ ಕಾಣಲು ಸಾಧ್ಯ ಇದನ್ನು ನಂಬುವುದು, ಭಕ್ತಿಯಿಂದ ನಡೆದುಕೊಳ್ಳುವುದು ಶ್ರಮಿಕ ವರ್ಗದವರು ಮಾತ್ರ. ಆಳುವವ ವರ್ಗ ಇದನ್ನು ದೇವರೆಂದು ಭಾವಿಸುವುದೇ ಇಲ್ಲ. ಈ ಬಗೆಯ ಗಣ, ಮೈಮೇಲೆ ಬರುವುದು ಕ್ಷುದ್ರ ದೇವತೆಗಳೆಂದೇ ಅವರು ಭಾವಿಸಿರುವುದು ಮತ್ತು ತಿರಸ್ಕರಿಸಿರುವುದು. ಆದರೆ ಭಿಕಾರಿಗಳು ಗ್ರಹಿಸುವ ರೀತಿಯೇ ವಿಭಿನ್ನವಾಗಿದೆ ಗಂಗಾಮಾವಶಿಗೆ ಮೈಮೇಲೆ ದೇವರು ಬಂದಾಗ "ತಾಯೀ, ಅಂಬಾಬಾಯಿ, ನಿನಗ್ಯಾನ ಬೇಕ ಬೇಡಿಕೊ, ಆದರ ನಮ್ಮ ಬಾಬಾಗ ಚಲೂಮಾಡ ನಮನ್ಯಾಗ ದುಡ್ಯಾವ್ರು ಯಾರೂ ಇಲ್ಲ ನಿಂಗ ಗೊತ್ತ ಏತಿ" (ಪುಟ 13 ಪಾಂಡುರಂಗ ಅಜ್ಜನ ಮಗಳು),"ಬಾಬಾ ರಾಜಾರುಟಿಂಗಾ, ನೀ ಯಾನ ಬೇಕಾದ್ದ ಬೇಡ ಅದರ ನನ್ನ ಅಣ್ಣ ಮಾತ್ರ ಬಿಡ" (ಪುಟ 13 ಮಾರುತಿ ಮಾಮ), "ನಾಬಿಡಬೇಕಾದ್ರ ಒಂದು ಕೋಳಿ, ಐದ ಚಪಾತಿ, ಒಂದು ತೆಂಗಿನಕಾಯಿ, ಅನ್ನ ಮತ್ತು ಲಿಂಬು, ನೀವು ಸಂಜೀಕ ಹ್ವಾದ ಮ್ಯಾಲ ನನ್ನ ಹೆಸರ್ಗ್ಗಿ ಈ ಹಾದಿಕಡೀ ಮೇಲೆ ಮಾಡಿ ಇಳಿಸಬಿಡಬೇಕ ಅಂದ್ರನಾ ಹೋಗಾಂವಾ ಇಲ್ಲಾದ್ರ ಇಂವ್ನ ನನ ಬರೋಬರಿ ತಂಗೊಡ ಹೋಗಾಂವಾ" ಎಂದು ಹೇಳಿದಳು (ಪುಟ 13). ಶ್ರಮ ಜೀವಿ ವರ್ಗದ ಮೈಮೇಲೆ ಬಂದ ದೇವತೆಗಳು ಬಾಯಿಬಿಟ್ಟು ಕೇಳುವ ಕಾಣಿಕೆ ನೋಡಿದರೆ ಇವರ ದೇವತೆಗಳು ಕೂಡ ಹಸಿವಿನಿಂದ ಬಳಲಿ ಕೊಂಡಿರುವ ಹಾಗೆ ಕಾಣಿಸುತ್ತದೆ. ಜೊತೆಗೆ ಪರಿಹಾರ ಕೇಳುವುದು ಕೋಳಿ ಮತ್ತು ಅದಕ್ಕೆ ಪೂರಕವಾದ ಆಹಾರದ ಸಾಮಾಗ್ರಿಗಳು ಹೀಗಾಗಿ ಶೂದ್ರ ಸಮುದಾಯದ ಜನರ ನಂಬಿಕೆಗಳಿರುವುದು ಮೈಮೇಲೆ ಬರುವ

ದೇವತೆಗಳ ಮೇಲೆ ಸಂಕಷ್ಟದ ಪರಿಹಾರ ಅವರು ಕೊಡುವ ವಸ್ತುಗಳ ಪ್ರಮಾಣದ ಮೇಲೆ ನಿಂತಿದೆ. ಹೀಗಾಗಿ ಮಾಂಸಾಹಾರಿ ಮೈಮೇಲಿನ ದೇವರುಗಳ ನಂಬಿದ ಈ ವರ್ಗ ಈ ಮೂಲಕ ಭಿನ್ನ ಭಿನ್ನ ಕೋರಿಕೆಗಳನ್ನು ಸಲ್ಲಿಸುತ್ತಾ ದೇವರೊಂದಿಗೆ ಸಂಭಾಷಿಸುವ ವಿಶಿಷ್ಟ ಮನೋಧರ್ಮ, ದೇವರನ್ನು ಪ್ರತ್ಯಕ್ಷವಾಗಿ ಕಾಣುವ ವಿಭಿನ್ನ ನೋಟವನ್ನು ಇವರು ಕಂಡು ಕೊಂಡರು ಮತ್ತು ತಮ್ಮ ಕಷ್ಟ ಪರಿಹಾರವನ್ನು ಈ ದೇವತೆಯ ಮೂಲಕ ಪರಿಹರಿಸಿಕೊಳ್ಳುವುದನ್ನು ಕಾಣುತ್ತೇವೆ.

ಮರಗಮ್ಮ ದೇವಿಯ ಜಾತ್ರೆ ಇವರಿಗೆ ಬಹಳ ವಿಶಿಷ್ಟವಾದುದು ಇದು ಇವರ ಸಂಸ್ಕೃತಿಯ ಪ್ರತೀಕವಾಗಿದೆ. ಪಾಂಡುರಂಗ ಅಜ್ಜನ ಸಾವು, ಅಂತ್ಯ ಸಂಸ್ಕಾರ, ತಿಥಿ ಮುಂತಾದ ಸಂಪ್ರದಾಯ ಅವರ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಹಾಗೆಯೇ ಜನಾಂಗದೊಳಗಿನ ನ್ಯಾಯ ಪಂಚಾಯ್ತಿ ಗಮನ ಸೆಳೆಯುತ್ತದೆ. ಅಪರಾಧ ಮಾಡಿದವರಿಗೆ ದಂಡ ವಿಧಿಸುವ ಪದ್ಧತಿ ಜಾರಿಯಲ್ಲಿತ್ತು ಪ್ರಖ್ಯಾತ ನ್ಯಾಯಾಧೀಶ ಬಾಬು ಮೋರೆ ಆಗಿದ್ದರು ಜಾತಿಯೊಳಗಿನ ಪ್ರೇಮ ವಿವಾಹಕ್ಕಾಗಿ 'ದಾಂಡಿ– ಮಾಂಡಿ' ಕಲುಮುಗಳ ಮುಂಖಾಂತರ ದಂಡವನ್ನು ವಿಧಿಸಲಾಗುತಿತ್ತು. ಇದು ಅವರದೇ ಜಗತ್ತಿನ ಸಂವಿಧಾನ ಎನ್ನಬಹುದು. ಛಾಯಾಳ ಲಗ್ನಕ್ಕಾಗಿ ಧಾರವಾಡಕ್ಕೆ ಹೋಗುವಾಗ ಈ ಜನಾಂಗ ಸಮಾಜಕ್ಕೂ ನಮಗೂ ಸಂಬಂಧವಿಲ್ಲ ಎನ್ನುವ ಹಾಗೆ ವರ್ತಿಸುತ್ತದೆ. ಇವರ ವರ್ತನೆಗಳು, ಕಿರುಚಾಟಗಳು, ಅನ್ಯರು ನಗುವಿಕೆ ಇವುಗಳು ವಿಶೇಷವಾಗಿ ಇಲ್ಲಿ ಕಂಡುಬರುತ್ತದೆ. ಹಾಗೆಯೇ ಬಸ್ ನಿಲ್ದಾಣದಲ್ಲಿ ಬಟ್ಟೆ ಬದಲಾಯಿಸುವಾಗ ಗಂಡಸರಿಗಾಗಲಿ, ಹೆಂಗಸರಿಗಾಗಲಿ ಲಜ್ಜೆ ಎಂಬುದು ಅನ್ವಯಿಸುವುದಿಲ್ಲ ಎಂಬ ಅಂಶವನ್ನು ಗಮನಿಸಿದರೆ ಇದನ್ನು ಮುಗ್ದತೆ ಎನ್ನಬೇಕೆ? ಅಥವಾ ಎಲ್ಲವನ್ನೂ ಸಾಮಾನ್ಯವೆಂದು ಗ್ರಹಿಸುವ ಮನಸ್ಥಿತಿಯೇ ಎಂದು ಆಲೋಚಿಸಬೇಕು. ಭೋಸಲೆಯ ಮಗಳು ಶಿರಮಾಳ ಮದುವೆ ಮಾತುಕತೆ, ವರದಕ್ಷಿಣೆ ವ್ಯಾಪಾರದಂತೆ ನಡೆಯುತ್ತದೆ. ಬೇರೆ ಸಮಾಜದ ಹಾಗೆ ಇಲ್ಲಿ ಇದು ಏಕೆ ಪ್ರವೇಶ ಪಡೆಯಿತು ಎಂಬುದು ಆಶ್ಚರ್ಯ ಉಂಟುಮಾಡುತ್ತದೆ. ಯಾರಿಗೆ ಯಾರು ಕೊಡುವ ಸ್ಥಿತಿಯಲ್ಲಿ ಇಲ್ಲದಿದ್ದರೂ ಕೂಳುಕೊಡುಗೆಗಳ ವ್ಯವಹಾರ ನಡೆಯುವುದು ಅನ್ಯಸಮಾಜದ ಪ್ರಭಾವ ಬೀರಿದಂತಿದೆ.

ಕುಟುಂಬ ಕಲ್ಯಾಣದ ಗಾಡಿ ಊರಿಗೆ ಪ್ರವೇಶ ಪಡೆದರೆ ಕೈಯಲ್ಲಿರುವ ರೊಟ್ಟಿ ಚೆಲ್ಲುವ ಹಾಗೆ ಓಡಿ ಹೋಗುತಿದ್ದರು. ದಾದಾಸಾಹೇಬನ ತಂಗಿ ಛಾಯಾಳು ಲಗ್ನದ ವಯಸ್ಸಿಗೆ ಬಂದರೂ ಆಕೆಯ ತಾಯಿ ಬಸುರಿಯಾಗಿದ್ದಳು ಇದೊಂದು ವಿಚಿತ್ರವಾದ ಸಂಗತಿ ಎಂದು ಗೋಚರಿಸುತ್ತದೆ. ಆಪರೇಷನ್ ಮಾಡಿಸಿದರೆ ಜನ ಸಾಯುತ್ತಾರೆ ಎಂಬ ಅಪನಂಬಿಕೆ ಅವರಲ್ಲಿ ಮನೆ ಮಾಡಿತ್ತು. ಆಪರೇಷನ್‌ಗಾಗಿ ದುಡ್ಡು ಸಿಗುತ್ತದೆ ಎಂದರೂ ಭಯಭೀತರಾಗುತಿದ್ದರು. ತಾಯಿಯ ಆಪರೇಷನ್ ಮಾಡಿಸಬೇಕು ಎಂದರೆ ತಂದೆ "ದ್ಯಾವ್ರುಜನಮದಾಗ ಹಾಕ್ತಾನು...... ಹ್ಯಾಂಗ ಜ್ವಾಪಾನ ಮಾಡೋದಾ ಆವಂಗ ಮಸ್ತ ಕಾಳಜಿ ಇರತೇತಿ" (ಪುಟ 139). ಎಂದು ಹೇಳುವುದು ಹಾಗೂ ಹುಟ್ಟುವ ಮಕ್ಕಳನ್ನು ದೇವರ ಮೇಲಾಕುವುದು ಅವರ ಮೂಢನಂಬಿಕೆಯನ್ನು ಸೂಚಿಸುತ್ತದೆ. ಜೊತೆಗೆ ಕುಟುಂಬದ ಜನ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಾ ಸಂಕಷ್ಟಗಳನ್ನು ಅನುಭವಿಸುವುದ ಕಂಡ ದಾದಾ ಸಾಹೇಬ ಅವರಿಗೆ ತಿಳುವಳಿಕೆ ಮೂಡಿಸಿ ತಾಯಿಯ ಸಂತಾನ ಹರಣ ಶಸ್ತ್ರಚಿಕಿತ್ಸೆಯನ್ನು ಮಾಡಿಸುವಲ್ಲಿ ಯಶಸ್ವಿಯಾಗುತ್ತಾನೆ. ಇದು ತಾನು ಕಲಿತ ವಿದ್ಯಾಭ್ಯಾಸದ ಫಲ ಎನ್ನಬಹುದು.

ದಾದಾಸಾಹೇಬನ ವ್ಯಾಸಂಗ ಸಲಗರದಿಂದ ಆರಂಭವಾಗಿ ಬಾವಚಿ ಶಾಲೆಯಲ್ಲಿ ಅಧಿಕೃತವಾಗಿ ಮುಂದುವರೆಯುತ್ತದೆ. ಏಕೆಂದರೆ ವಿದ್ಯೆ ಕಲಿಯಬೇಕೆಂಬ ಹಠ ದಾದಾಸಾಹೇಬನಲ್ಲಿತ್ತು. ಹೀಗಾಗಿ "ಅವ್ವಾ ಅಣ್ಣಾಗ ಹೇಳ...... ನನ್ನ ಸಾಲಿಗಿ ಹಾಕಂತ" ಎಂದು ಹೇಳುವಲ್ಲಿ ಸ್ಪಷ್ಟವಾಗುತ್ತದೆ. ಶಾಲಾಮಾಸ್ತರರ ಹೇಳಿಕೆಯೇ ಹೇಳುತ್ತದೆ ಇವರ ವ್ಯಾಸಂಗದ ಅವಧಿಯೆಷ್ಟು ಎಂದು "ನೀವು ತುಸುದಿಂದಾಗ ಹುಡುಗನಾಕರ್ರೊಂಡ ಊರೂರ ತಿರಗಾವ್ರು ಮತ್ತು ಸಾಲ್ಯಾಗ ಹೆಸರ ಹಚ್ಚಿಯಾರ ಕಲ್ಯಾವ್ರು" ಎಂಬ ಮಾತುಗಳು ಸ್ಥಿರವಾಗಿ ವ್ಯಾಸಂಗ ಮಾಡುವುದಿಲ್ಲ ಎಂಬ ಸೂಚನೆ ಸಿಗುತ್ತದೆ. ತನ್ನ ವಿದ್ಯಾಭ್ಯಾಸ ಸೋನಾ ಅಜ್ಜಿ, ಮಾನಕ ಅಜ್ಜಿ ನೆರವಿನಿಂದ ನಡೆಯುತ್ತದೆ. ವ್ಯಾಸಂಗದ ಅವಧಿಯಲ್ಲಿ ವ್ಯಾಸಂಗ, ಉಳಿದಂತೆ ಬೇಡುವ ವೃತ್ತಿಯಾಗಿತ್ತು. ವಿದ್ಯಾಭ್ಯಾಸಕ್ಕೆ ಗುರುಗಳ ನೆರವು ದೊರಕುತ್ತದೆ. ಆದರೆ ಅನೇಕ ಸಂಕಷ್ಟಗಳೂ ಎದುರಾಗುತ್ತದೆ. ಬಾಡಿಗೆ ಕಟ್ಟಬೇಕಾದಾಗ ದಿನನಿತ್ಯ ಬಸ್‌ನಲ್ಲಿ ಬರುವ ಆಹಾರಕ್ಕೆ ಕೊರತೆಯಾಗಿ ಓದನ್ನು ನಿಲ್ಲಿಸಬೇಕಾದಂತ ಪ್ರಸಂಗ ನಡೆಯುತ್ತದೆ. ಹೀಗಾಗಿ ಮಾನಕ ಅಜ್ಜಿ ಆಹಾರ ಕಳುಹಿಸಲು ಸಾಧ್ಯವಿಲ್ಲ ಎಂದಾಗ ತಂದೆಯನ್ನು ಹುಡುಕಿಕೊಂಡು ಅಥಣಿಗೆ ಇಪ್ಪತ್ತೆರಡು ದಿನ ಹುರುಕಿನ ನಡುವೆ ಅನ್ನ, ನೀರು, ಸ್ನಾನವಿಲ್ಲದೆ ನಡೆದಿದು ಅತ್ಯಂತ ಯಾತನೆಯ ಬದುಕು ದಾದಾಸಾಹೇಬರದಾಗುತ್ತದೆ. ಪಿ.ಯು.ಸಿ ಮತ್ತು ಬಿಕಾಂ ವ್ಯಾಸಂಗ ಮಾಡುವಾಗ ಹಣಕಾಸಿನ ಪರಿಸ್ಥಿತಿ ಸರಿ ಇಲ್ಲದ್ದರಿಂದ ಗಿರಮಲ್ಲಣ್ಣನ ಸಹಾಯದಿಂದ 'ಗಟಾರ ಸ್ವಚ್ಛ' ಮಾಡುವ ಕೆಲಸಕ್ಕೆ ಸೇರಿ ಕೊಳ್ಳುವುದನ್ನು ಗಮನಿಸಿದರೆ ದಾದಾಸಾಹೇಬನಲ್ಲಿ ಉಂಟಾದ ಸ್ವಾಭಿಮಾನ ಮತ್ತು ಛಲದಿಂದ ಕಾರ್ಯನಿರ್ವಹಿಸುತ್ತಾರೆ. ಬೇಡುವುದಕ್ಕಿಂತ ಇದೇ ಒಳ್ಳೆಯದು ಎಂಬುದು ಆತನ ಮನಸ್ಥಿತಿ ಜೊತೆಗೆ ಆತನ ಕಡು ಬಡತನ ಯಾವ ಮಟ್ಟಕ್ಕೆ ಇಳಿಸುತ್ತದೆ ಎಂಬುದನ್ನು ಗಮನಿಸಬಹುದು. ಬೆಳಗ್ಗೆ ಗಟಾರದ ಸ್ವಚ್ಛತೆ ನಂತರ ತರಗತಿ ಹೀಗೆ ಸಂಪಾದನೆ ಮಾಡಲು ಪ್ರಾರಂಭಿಸಿದರು. ಅನಿವಾರ್ಯವಾಗಿ ಈ ಕೆಲಸ ನಿರ್ವಹಿಸಬೇಕಾದ ಪರಿಸ್ಥಿತಿ ಎದುರಾಯಿತು ಅಸಹ್ಯ, ವಾಸನೆ, ಅಪಹಾಸ್ಯದ ನಡುವೆ ಬದುಕಬೇಕಾದ ಪರಿಸ್ಥಿತಿ ಇವರದಾಗಿತ್ತು. ಸತ್ತು ಹೋಗಬೇಕೆನಿಸುವುದು, ತಿರಸ್ಕಾರದ ಮಾತುಗಳು ನಿತ್ಯವಾಗಿದ್ದವು ಪದವಿ ಹಂತದಲ್ಲಿ ಗಣೇಶೋತ್ಸವ ಸಮಾರಂಭದಲ್ಲಿ ನಾಟಕಗಳಲ್ಲಿ ಅಭಿನಯಿಸುವುದು ಅದರಿಂದ ಬಿಡಿಗಾಸು, ಸ್ಕಾಲರ್‌ಶಿಪ್ ನಿಂದ ಬಂದ ಹಣ ಇವರ ವಿದ್ಯಾಭ್ಯಾಸ ಮುಗಿಸಲು ಸಹಕಾರಿಯಾಗುತ್ತದೆ.

ದಾದಾಸಾಹೇಬ ವಿದ್ಯಾಭ್ಯಾಸ ಮಾಡಿದ್ದರಿಂದ ತಮ್ಮ ತಾತ್ಯಾಸಾಬನನ್ನು ವಸತಿಶಾಲೆಗೆ ಸೇರಿಸುವಂತಾದುದು ಒಳ್ಳೆಯ ಬೆಳವಣಿಗೆ ವಿದ್ಯಾಭ್ಯಾಸದ ಕಾರಣಕ್ಕಾಗಿ ಎಂತಹ ವಿಚಿತ್ರ ಪರಿಸ್ಥಿತಿ ಎಂದರೆ ಇವರ ಜನಾಂಗ ಸಮಾಜದಿಂದ ಭೀಕ್ಷೆ ಬೇಡುತಿದ್ದರೆ ದಾದಾಸಾಹೇಬನ ತಂದೆ ತಮ್ಮ ಜನಾಂಗದಿಂದಲೇ ಶಿಕ್ಷಣದ ಸಲುವಾಗಿ ಬೇಡುವಂತಹ ಪರಿಸ್ಥಿತಿ ಎದುರಾದುದು ವಿಪರ್ಯಾಸ ಎನ್ನಬಹುದು.

ವಿದ್ಯಾಭ್ಯಾಸದಿಂದ ಧೈರ್ಯ, ಸಂಪಾದನೆ, ಜ್ಞಾನಾರ್ಜನೆ ಒಂದು ಹಂತ ತಲುಪಿಸಿದಾಗಲೂ ಕೂಡ ಬೇಡುವಿಕೆ ನಿಲ್ಲಲಿಲ್ಲ. ಆದರೆ ಪ್ರತಿಭಟನಾ ಮನೋಭಾವ ಅವರಲ್ಲಿ ಕಾಣತೊಡಗುತ್ತದೆ. ಬೇಡಲು ಹೋದಾಗ. ನಾಯಿ ಕಚ್ಚಲು ಬಂದಾಗ ಕಲ್ಲಿನಿಂದ ನಾಯಿಗೆ ಹೊಡೆಯುವುದು, ವ್ಯಕ್ತಿಯೊಬ್ಬ ದಾದಾಸಾಹೇಬನ ಕೆನ್ನೆಗೆ ಹೊಡೆಯುವುದು, ಮಾತಿಗೆ ಮಾತು ಬೆಳೆದು "ನಾಯಿಗಿ ಕಲ್ಲ ಒಗದೀವಂತ ನಮ್ಮನ್ನ ಬಡೀತೀರಿ..... ಜರ್‌ನಾಯಿ ಕಡದಿತ್ತಂದ್ರ ನೀವ್ಯಾನ ಮಾಡ್ತಿದ್ರಿ" ಎಂಬ ಮರು ಪ್ರಶ್ನೆಯ ಮಾತುಗಳು ತನ್ನ ಕಲಿಕೆಯ ಹಿನ್ನೆಲೆಯಿಂದ

ಬಂದಂತವುಗಳಾಗಿದ್ದವು. ಹೀಗಾಗಿ ಹಲ್ಲೆಯನ್ನೂ ಸಹಿಸಿಕೊಳ್ಳುತ್ತಾ, ಪ್ರತಿಭಟನೆಯ ಮಾತುಗಳು ಹೊರಬರುತ್ತವೆ.

ದಾದಾ ಸಾಹೇಬ ತನ್ನ ಕುಟುಂಬದ ವ್ಯವಸ್ಥೆಯ ಬಗ್ಗೆಯೇ ಆತ್ಮವಿಮರ್ಶೆ ಮಾಡತೊಡಗಿದ ಎಲ್ಲರೂ ಸಾಹೇಬರೇ ಆದರೆ ಒಬ್ಬ ಸಾಹೇಬ ಗಟಾರ ಸ್ವಚ್ಚಗೊಳಿಸುತಿದ್ದ, ಭಿಕ್ಷೆ ಬೇಡುತ್ತಾ ಕಷ್ಟ ಪಡುತಲಿದ್ದ, ಎರಡನೆಯ ಸಾಹೇಬ ಅಜನ್ಮದಿಂದ ಭಿಕ್ಷುಕ, ಮೂರನೇ ಸಾಹೇಬ ಅನಾಥಶ್ರಮದಲ್ಲಿದ್ದು ಕೊಂಡು ಕಲಿಯುತಿದ್ದ ನಾಲ್ಕನೆಯ ಸಾಹೇಬ ಏನು ಮಾಡುವವನಿದ್ದ ಯಾರಿ ಗೊತ್ತು" (ಪುಟ 141) ಹೀಗೆ ಕುಟುಂಬದೊಳಗಿನ ಸಮಸ್ಯೆಯನ್ನು ವ್ಯಂಗ್ಯವಾಗಿ ಗ್ರಹಿಸುತ್ತಾ, ವಿದ್ಯಾಭ್ಯಾಸದ ನಂತರದ ದಿನಗಳು ಚಿಂತಿಸುವಂತೆ ಮಾಡಿತು. ಇದಕ್ಕೆ ಕಾರಣ ಅನಕ್ಷರತೆ, ಮೂಢನಂಬಿಕೆ, ಆರ್ಥಿಕ ಸಮಸ್ಯೆ ಎಂಬ ಅರಿವು ದಾದಾ ಸಾಹೇಬರಲ್ಲಿತ್ತು. ಹಾಗೆಯೇ ಇವುಗಳಿಂದ ಮುಕ್ತವಾಗುವ ಬಯಕೆ ಅವರಲ್ಲಿತ್ತು.

ಪ್ರಾಥಮಿಕ ಹಂತದಿಂದ ಪದವಿಯವರೆಗೆ ಅಂದರೆ ಸಲಗರ, ಜತ್ತ, ಗೊಂದ'ಳವಾಡಿವರೆಗೆ' ಅನೇಕ ಸಂಕಟಗಳನ್ನು ಅನುಭವಿಸಿದ ದಾದಾಸಾಹೇಬ ಕೊನೆಗೂ ಪದವಿಯನ್ನು ಮುಗಿಸುವುದು, ನಂತರದ ಬದುಕು ಶೂನ್ಯವಾಗಿ ಕಾಣುತ್ತದೆ. ಆದ್ದರಿಂದ "ಇಲ್ಲಿಯ ಪ್ರಾಥಮಿಕ ಹಂತದಿಂದ ಪದವಿಯವರೆಗೆ ಅನೇಕ ಸಂಕಟಗಳನ್ನು ಅನುಭವಿಸಿದ ದಾದಾಸಾಹೇಬ ಕೊನೆಗೂ ಪದವಿಮುಗಿಸುವುದು ನಂತರದ ಬದುಕೇನು ಎನ್ನುವುದು ಶೂನ್ಯವಾಗಿ ಕಾಣುತ್ತದೆ. ಆದ್ದರಿಂದ "ಇಲ್ಲಿಯವರೆಗಂತೂ ನಾನು ಅನೇಕ ದುಃಖಗಳಲ್ಲಿ, ಸಂಕಟಗಳಲ್ಲಿ ಹೋರಾಡುತ್ತ ಬಂದಿದ್ದೇನೆ ನನ್ನ ಅಲೆಮಾರಿ, ಅಸಹಾಯಕ ಬದುಕಿನಲ್ಲಿಯೇ ನಾನು ಒಂದಿಷ್ಟಾದರೂ ನೀಟಾಗಿ ನಿಲ್ಲಬೇಕೆಂದಿದ್ದೇನೆ ನನ್ನ ಭವಿಷ್ಯತ್ತಿನ ಬಗೆಗೆ ನಾನಂತೂ ಅಂಧಕಾರದಲಿದ್ದೇನೆ. ನನ್ನಂಥ ಕತ್ತಲೆಯ ಪ್ರಯಾಣಿಕನಿಗೆ ಕತ್ತಲೆಯ ಹೊರತು ಬೇರೆ ಸಂಗತಿ ಹೇಗೆ ನೆರವಾಗಬಲ್ಲದು? ಮನಸ್ಸಿನಲ್ಲಿ ಅನೇಕ ಬೆಳಗುಗಳು ಎಂದೋ ಬೆಳಕು ತೋರಿವೆ ಆದರೆ ವಾಸ್ತವದ ಬದುಕಿನಲ್ಲಿ ಅವುಗಳಲ್ಲಿಯ ಒಂದಾದರೂ ಬೆಳಗು ಯಾವಾಗ ಬೆಳಕು ತೋರುವುದೋ ಯಾರಿಗೆ ಗೊತ್ತು" (ಪುಟ 159). ಎಂಬ ಆತಂಕ ನಿರಂತರವಾಗಿ ಕಾಡುತಿತ್ತು.

ಹೀಗೆ ಇಡೀ ಕಥನದ ಆಶಯ ಕತ್ತಲು ಬೆಳಕಿನ ನಡುವಿನ ಹೋರಾಟ, ಅಸಹಾಯಕತೆ ಬದುಕಿಗೊಂದು ಗಟ್ಟಿತನ ಬೇಕೆನ್ನುವ ಛಲ, ಹತಾಶೆ ಮುಂತಾದ ಅನೇಕ ಸಂಗತಿಗಳು ಮನೆಮಾಡಿವೆ. ಒಟ್ಟಿನಲ್ಲಿ ಈ ಕಥನದ ಪ್ರಾರಂಭದಿಂದ ಅಂತ್ಯದವರೆಗೆ ಅತಂತ್ರವಾದ ಅನೇಕ ಕುಟುಂಬಗಳು ತನ್ನ ನೆಲೆಯನ್ನು ಕಳೆದುಕೊಂಡಿರುವುದು. ಹೀಗೆ ಕಳೆದುಕೊಂಡಿರುವುದರ ಹಿಂದೆ ಸಾಮಾಜಿಕ, ಆರ್ಥಿಕ ಶಕ್ತಿ ಹಿನ್ನೆಡೆಯಾಗಿರುವುದೇ ಪ್ರಮುಖ ಕಾರಣ. ಈ ಅಧ್ಯಯನದಿಂದ ಅಲೆಮಾರಿ ಬದುಕಿನ ಹೊಸ ಜಗತ್ತೊಂದರ ಸಾಂಸ್ಕೃತಿಕ ಬದುಕಿನ ಅನಾವರಣ ಆಗುತ್ತದೆ. ಅದರ ಜೊತೆಗೆ ಈ ಎಲ್ಲ ಸಂಕಷ್ಟಗಳಿಗೆ ಕಾರಣ ಮತ್ತು ಪರಿಹಾರಗಳನ್ನು ಕಂಡುಕೊಳ್ಳಬೇಕಾಗಿದೆ. ಸಿರಿವಂತಿಕೆ ಇಲ್ಲದೆ ಹೊಟ್ಟೆ ಪಾಡಿನ ಬದುಕಿಗಾಗಿ ಜೀವನವಿಡೀ ಅಲೆಮಾರಿತನ, ಭಿಕ್ಷೆ, ಭವಿಷ್ಯ ಹೇಳುವುದೆಂಬ ವೃತ್ತಿ, ಇವುಗಳೆಲ್ಲದರ ನಡುವೆ ತನ್ನ ಬದುಕನ್ನು ಹಸನುಮಾಡದ ದೇವರು, ಜಾತ್ರೆ ಮತ್ತು ಹಬ್ಬಗಳು ತಮ್ಮ ಬದುಕನ್ನು ಹೊಸ ರೀತಿಯಲ್ಲಿ ಕಟ್ಟಿಕೊಡುತ್ತವೆ ಎಂಬ ಭ್ರಮೆ, ನಂಬಿಕೆಗಳು ಈ ಕೃತಿಯಲ್ಲಿ ಅಡಕವಾಗಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ದಾದಾಸಾಹೇಬರ' ಬಾಲ್ಯದಿಂದ ಪದವಿಯವರೆಗಿನ ಓದಲೇ ಬೇಕೆಂಬ ಹಠ, ಈ ಛಲದ ಕಾರಣಕ್ಕಾಗಿ ಅನುಭವಿಸುವ ವಿಭಿನ್ನ ಯಾತನೆಗಳು, ಶ್ರಮ, ಕಲಾವಿದನಾಗುವ ರೀತಿ ಮುಂತಾದ ಬಹುಮುಖ ಪ್ರತಿಭೆಯನ್ನು ಅನುಭವವೇ ರೂಪಿಸುತ್ತದೆ. ಈ ಅನುಭವ ಹಾಗೂ ಕುಟುಂಬದೊಳಗಿನ ತಮ್ಮಂದಿರ ವಿದ್ಯಾಭ್ಯಾಸ, ತನ್ನ ಸಮಾಜದಲ್ಲಿ ಗುರುತಿಸಲ್ಪಡುವ ವಿಭಿನ್ನ, ವಿಶೇಷ ಶಕ್ತಿಯಾಗಿ ನಿಲ್ಲಲು ಸಾಧ್ಯವಾಗುತ್ತದೆ. ಆ ಶಕ್ತಿಯಲ್ಲಿ ಕನಸಿದೆ, ಛಲವಿದೆ, ಹೋರಾಟವಿದೆ, ವಿದ್ಯೆಯಿಂದ ಎಲ್ಲವನ್ನೂ ಗಳಿಸಬಹುದೆಂಬ ಬಹುದೊಡ್ಡ ನಿರೀಕ್ಷೆಯಿದೆ. ದಾದಾಸಾಹೇಬರನ್ನು ಅಲೆಮಾರಿ ಸಮುದಾಯ ಅನುಕರಿಸಬಲ್ಲ ಭವಿಷ್ಯತ್ತಿನ ಒಬ್ಬ ಆದರ್ಶ ವ್ಯಕ್ತಿಯಾಗಿ ನಮ್ಮ ಮುಂದೆ ಕಾಣುತ್ತಾರೆ. ಒಟ್ಟಿನಲ್ಲಿ 'ಗಬಾಳ' ಮರಾಠಿಯ ದಲಿತರ ಸಾಮಾಜಿಕ, ಶೈಕ್ಷಣಿಕ ಬದುಕಾದರೂ ಇಡಿ ದಲಿತ ಸಮುದಾಯದವರ ಬದುಕನ್ನು ಪ್ರತಿನಿಧಿಸುತ್ತಿದೆ. ಈ ಮೂಲಕ ದಲಿತರ ಬದುಕಿನ ಖಂಡಕಾವ್ಯದಂತಿರುವ 'ಗಬಾಳ' ವ್ಯಕ್ತಿಯೊಬ್ಬನ ಬದುಕು ಬೆಳೆದ ಪರಿಯನ್ನು ಅನುಭವನಾತ್ಮಕ ಸೂಚ್ಯಗಳ ಮೂಲಕ ಕಟ್ಟಿಕೊಟ್ಟಿದೆ. ಅಷ್ಟೇ ಅಲ್ಲದೇ, ಪ್ರತಿಯೊಬ್ಬ ದಮನಿತರ ಬದುಕಿನ ಚೇತನವಾಗಿ ನಿಲ್ಲುತ್ತದೆ ಜೊತೆಗೆ "ಆತ್ಮಕಥೆಗಳ ರಚನೆ ವ್ಯಕ್ತಿ ನೆಲೆಯದ್ದಾದರೂ ಸಮಷ್ಟಿ ನೆಲೆಯನ್ನು ಪರಿಚಯಿಸುವುದರ ಮೂಲಕ ಕಥೆಗಳಾಗಿ ಮಾತ್ರ ಉಳಿಯದೆ ಒಂದು ಪ್ರದೇಶ, ಪರಿಸರ, ಜನಾಂಗದ ಚರಿತ್ರೆಯಾಗಿ ಬೆಳೆದು ಬಂದಿರುವುದನ್ನು ಗುರುತಿಸಬಹುದಾಗಿದೆ. ವಾಸ್ತವ ಬದುಕನ್ನು ಅನಾವರಣಗೊಳಿಸುವ ಕಾರಣವಾಗಿ ಚರಿತ್ರೆಯ ಮಹತ್ವವನ್ನು ; ಆ ಬದುಕಿಗೆ ಕಲಾತ್ಮಕ ಅಭಿವ್ಯಕ್ತಿ ಕೊಟ್ಟ ಕಾರಣವಾಗಿ ಸಾಹಿತ್ಯಿಕ ಗೌರವವನ್ನು ಪಡೆದುಕೊಂಡ ಆತ್ಮಕಥನಗಳು ಚರಿತ್ರೆಗೆ ಚರಿತ್ರೆ : ಸಾಹಿತ್ಯಕ್ಕೆ ಸಾಹಿತ್ಯವೆನಿಸಿದೆ"[4] ಎಂಬ ಮಾತು ಗಮನಿಸಬೇಕಾದ ಸಂಗತಿ.

**ಕೊನೆ ಟಿಪ್ಪಣಿ**

1. ಲಕ್ಷ್ಮಣ್ : ಸಂಬೋಳಿ : ಪುಟಸಂಖ್ಯೆ : 44
2. ಮುಳ್ಳೂರು ನಾಗರಾಜು : ಮಾಮರದ ಮೇಲೊಂದು ಕೋಗಿಲೆ : ಪುಟಸಂಖ್ಯೆ : 46–47
3. ಸಂಸ್ಕೃತಿ ಕಥನ : ಡಾ. ಡಿ.ಆರ್. ನಾಗರಾಜ್ : ಸಂ. ಅಗ್ರಹಾರ ಕೃಷ್ಣಮೂರ್ತಿ : ಪುಟಸಂಖ್ಯೆ : 507 : 2008
4. ದಶಕದ ಕನ್ನಡ ಸಾಹಿತ್ಯ : ಸಂ. ಡಾ. ಎಫ್.ಟಿ ಹಳ್ಳಿಕೇರಿ, ಡಾ. ಕೆ. ರವೀಂದ್ರನಾಥ : ಲೇಖನ : ಸುಜಾತ ಅಕ್ಕಿ: ಪ್ರಸಾರಂಗ : ಕನ್ನಡ ವಿವಿ ಹಂಪಿ : 2002

**ಆಕರ ಗ್ರಂಥ**

**ಪರಾಮರ್ಶನ ಗ್ರಂಥಗಳು**

1. ಅಗ್ರಹಾರ ಕೃಷ್ಣಮೂರ್ತಿ (ಸಂ), ಸಂಸ್ಕೃತಿ ಕಥನ, ಸಪ್ನ ಬುಕ್ ಹೌಸ್, ಬೆಂಗಳೂರು, 2008
2. ಅಶೋಕ ಟಿ.ಪಿ., ಶಿವರಾಮ ಕಾರಂತ:ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, 2008
3. ಗುರುಲಿಂಗ ಕಾಪಸೆ (ಸಂ), ಆತ್ಮಶೋಧ, ಚೆನ್ನಬಸವ ಪ್ರಕಾಶನ, ಹಲಸಂಗಿ, 2004
4. ಗಿರೀಶ್ ಮೂಗ್ತಿಹಳ್ಳಿ, ಅಕ್ಷರ ಮೈತ್ರಿ, ಶ್ರೀ ಮರಡಿಲಿಂಗೇಶ್ವರ ಪ್ರಕಾಶನ, ಮೈಸೂರು, 2021
5. ದೇಜಗೌ, ಕುವೆಂಪು ದರ್ಶನ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007
6. ಹಳ್ಳಿಕೇರಿ ಎಫ್. ಓ. ರವೀಂದ್ರನಾಥ ಕೆ (ಸಂ), ದಶಕದ ಕನ್ನಡ ಸಾಹಿತ್ಯ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002